ಹಿರಿಯ ಕವಿ ಚೆನ್ನವೀರ ಕಣವಿ. ಅವರ ಜೊತೆ ಜೊತೆಯಲ್ಲೇ ಸಮೃದ್ಧವಾಗಿ ಮಕ್ಕಳ ಕವಿತೆಗಳನ್ನು ಬರೆದವರು, ಅವನ್ನು ಕೆಸೆಟ್ ಮೂಲಕವಾಗಿ ನಾಡಿನಾದ್ಯಂತ ಪ್ರಚುರ ಪಡಿಸಿದವರು ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು. 'ಭಾಳ ಒಳ್ಳೆವರು ನಮ್ಮಿಸ್ಸು; ಏನ್ ಹೇಳಿದ್ರೂ ಎಸ್ಸೆಸ್ಸು!' ಎಂಬ, ಮಕ್ಕಳಿಗೆ (ಹಾಗೇ ಅವರ ಮಿಸ್ಸುಗಳಿಗೂ) ಬಹಳ ಪ್ರಿಯವಾದ ಲಕ್ಷ್ಮೀನಾರಾಯಣ ಭಟ್ಟರ ಪದ್ಯವನ್ನು ಮರೆಯಲಿಕ್ಕುಂಟೇ? ಹಾಗೇ ಸುಮತೀಂದ್ರ ನಾಡಿಗರು ಭಟ್ಟರ ಜೊತೆಜೊತೆಯಲ್ಲೇ ಅನೇಕ ಸೊಗಸಾದ ಮಕ್ಕಳ ಕವಿತೆಗಳನ್ನು ಬರೆದು ಪ್ರಕಟಿಸಿದ್ದಾರೆ. 'ಆಕಾಶಕ್ಕೆ ಏಣಿಯಿಟ್ಟು ಚಂದ್ರನ್ ಹತ್ರ ಹೋಗ್ತೀನಿ; ಹಲ್ಲೋ ಮಿಸ್ಟರ್ ಚಂದ್ರ ಅಂತ ಷೇಕ್ ಹ್ಯಾಂಡ್ ಮಾಡ್ತೀನಿ!' – ಇದು ನಾಡಿಗರ ಬಹಳ ಜನಪ್ರಿಯವಾದ ಮಕ್ಕಳ ಕವಿತೆ.

> ಮಕ್ಕಳ ಕವಿತೆಗಳು ಎಂತೆಂಥಾ ಕಠೋರ ಸತ್ಯಗಳನ್ನು ತಮ್ಮ ಹೃದಯದಲ್ಲಿ ಬಚ್ಚಿಟ್ಟುಕೊಂಡಿರುತ್ತವೆ ಎನ್ನುವುದಕ್ಕೆ ಬ್ರೌನಿಂಗ್ ಕವಿಯ 'ಪೈಡ್ ಪೈಪರ್ ಆಫ್ ಹ್ಯಾಮಲಿನ್' ಎಂಬ ಪ್ರಸಿದ್ಧ ಕವಿತೆಯನ್ನು ಗಮನಿಸಬೇಕು.

ಪ್ರಸಿದ್ಧ ಕವಿಗಳಾದ ಮತ್ತು ಲೇಖಕರಾದ ಕೆ.ವಿ. ತಿರುಮಲೇಶ್, ವೈದೇಹಿ, ಚಿಂತಾಮಣಿ ಕೊಡ್ಲೆಕೆರೆ, ಭಾಗೀರಥಿ ಹೆಗಡೆ, ಜೀನಹಳ್ಳಿ ಸಿದ್ಧಲಿಂಗಪ್ಪ, ಬಿಳಿಗೆರೆ ಕೃಷ್ಣಮೂರ್ತಿ, ಕುರುವ ಬಸವರಾಜ, ಸಿ.ಎಂ. ಗೋವಿಂದರೆಡ್ಡಿ, ರಾಧೇಶ ತೋಳ್ಪಾಡಿ, ತಮ್ಮಣ್ಣ ಬೀಗಾರ, ಆನಂದ ಪಾಟೀಲ, ಶ್ರೀನಿವಾಸ ಉಡುಪ (ಇವರ 'ಕುಂಭಕರ್ಣ ನಿದ್ದೆ' ಅದ್ಭುತವೆನಿಸುವ ಮಕ್ಕಳ ಕಥನಕವನ), ಪ್ರಸಿದ್ಧ ಕತೆಗಾರ ಈಶ್ವರಚಂದ್ರ, ಅಮೆರಿಕೆಯಲ್ಲಿ ನೆಲೆಸಿರುವ ಮೀರಾ ನಿರಂತರವಾಗಿ ಮಕ್ಕಳಿಗಾಗಿ ಬರೆಯುತ್ತಾ ಇದ್ದಾರೆ. ಮೇಲೆ ಉಲ್ಲೇಖಿಸಿದ ಹೆಸರುಗಳಲ್ಲಿ ಆನಂದ ಪಾಟೀಲರು ಸ್ವತಃ ಮಕ್ಕಳ ಕಥೆ, ಕವಿತೆ ಬರೆಯುವುದರೊಂದಿಗೇ ಮಕ್ಕಳ ಸಾಹಿತ್ಯದ ಮೀಮಾಂಸೆಯನ್ನೂ ಬೆಳೆಸುತ್ತಿರುವವರಾಗಿ ಬಹಳ ಮುಖ್ಯರಾಗಿದ್ದಾರೆ.

ಮಕ್ಕಳ ಕಾವ್ಯದ ಬಹು ಮುಖ್ಯ ಸಂಕಲನ ಪ್ರಕಟಿಸಿದವರಲ್ಲಿ ಬೊಳುವಾರು ಪ್ರಥಮ ಪಂಕ್ತಿಯಲ್ಲಿ ನಿಲ್ಲುತ್ತಾರೆ. ಆ ಮಹತ್ವದ ಕಾವ್ಯಸಂಪುಟದಲ್ಲಿ ಸ್ವತಃ ಬೊಳುವಾರರೇ 1975ರಿಂದೀಚೆಗೆ ಎರಡನೆಯ ಸಂಪುಟಕ್ಕೆ ಆಗಬಹುದಾದಷ್ಟು ಒಳ್ಳೆಯ ಮಕ್ಕಳ ಪದ್ಯಗಳು 'ಹಕ್ಕಿಸಾಲು'ಗಳಂತೆ ಕಾದು ಕುಳಿತಿರುವುದರಿಂದಾಗಿ ಅವುಗಳನ್ನು ಈ ಸಂಪುಟದಲ್ಲಿ ಸೇರಿಸಿಕೊಳ್ಳದೆ ಇರುವುದನ್ನು ಸೂಚಿಸಿದ್ದಾರೆ. 1975ರಿಂದ ಈಚೆಗೆ ಕನ್ನಡದಲ್ಲಿ ಅನೇಕ ಬಹು ಮುಖ್ಯವಾದ ಕವಿತಾ ಸಂಗ್ರಹಗಳು, ಕತೆ ಕಾದಂಬರಿಗಳು ಕನ್ನಡದಲ್ಲಿ ಬಂದಿವೆ. ಬೊಳುವಾರರ ಕೃತಿಗೆ ಪೂರಕವಾಗುವಂಥ ಎರಡನೇ ಕಾವ್ಯ ಸಂಪುಟ ಪ್ರಕಟವಾಗುವುದು ಅಪೇಕ್ಷಣೀಯವಾಗಿದೆ. ಅಂಥ ಸಾಹಸವನ್ನು ಯಾರು ಕೈಗೊಳ್ಳುವರೋ ಕಾದು ನೋಡಬೇಕಾಗಿದೆ. ಹಾಗೇ ನಾಟಕ–ಕತೆ–ಕಾದಂಬರಿಗಳ ಸಂಕಲನವೂ ಹೊರಬರಬೇಕಾಗಿದೆ.

ಮಕ್ಕಳ ನಾಟಕಗಳಲ್ಲಿ ಒಳ್ಳೆಯ ಕೃತಿಗಳು ಹೊರಬಂದಿವೆ. ಕುವೆಂಪು, ಕಾರಂತರಿಂದ ಮೊದಲ್ಗೊಂಡು, ಬಿ.ವಿ. ಕಾರಂತ, ಕೆ.ವಿ. ಸುಬ್ಬಣ್ಣ, ವೈದೇಹಿ, ಅನೇಕ ಸೊಗಸಾದ ಮಕ್ಕಳ ನಾಟಕಗಳನ್ನು ಬರೆದಿದ್ದಾರೆ. ಮಕ್ಕಳ ನಾಟಕಗಳ ರಂಗಪ್ರಯೋಗದಲ್ಲಿ ಬಿ.ವಿ. ಕಾರಂತ, ಪ್ರೇಮಾ ಕಾರಂತ, ಶ್ರೀಪಾದ ಭಟ್ಟ, ಕೃಷ್ಣಮೂರ್ತಿ ಕವತಾರ, ಬಿ. ಜಯಶ್ರೀ, ಸುಷ್ಮಾ ಮತ್ತು ಕಶ್ಯಪ್, ಹೊನ್ನಾವರದ ಕಿರಣ್ ಭಟ್, ಸುಳ್ಯದ ಮೂರ್ತಿ ದೇರಾಜೆ, ಮೋಹನ್ ಸೋನ, ಐ.ಕೆ. ಬೊಳುವಾರು